REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No.
WPP.CO-1
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 29th November instead of 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 35 ನವೆಂಬರ್ 2022 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 11

## ಅಧ್ಯಕ್ಷರ ನುಡಿ

**ವ್ಯಾ**ಪಾರ ವಾಣಿಜ್ಯೋದ್ಯಮಿಗಳ ಮೂಲಕ ಲಕ್ಷ್ಮೀಪುತ್ರರೆಂದು ಕರೆಸಿಕೊಳ್ಳುತ್ತಿದ್ದ ಆರ್ಯವೈಶ್ಯ ಸಮಾಜ ಕಳೆದ 2–3 ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ದಾಪುಗಾಲು ಇಟ್ಟಿದೆ. 2020–2021ರ ಶೈಕ್ಷಣಿಕ ವರ್ಷದಲ್ಲಿ ವಿಶ್ವವ್ಯಾಪಿ ಸಾಧನೆ ಮೆರೆದ ವಿದ್ಯಾಮಾಣಿಕ್ಯಗಳ ವಿಶ್ವರೂಪ ದರ್ಶನದ ವಿರಾಟ್ ಕಾರ್ಯಕ್ರಮವೇ **12ನೇ ಪ್ರತಿಭೋತ್ಸವ.** ದಿನಾಂಕ 20–11–2022ರ ಭಾನುವಾರದಂದು ಬೆಂಗಳೂರು ಅರಮನೆ ಮೈದಾನದ ತ್ರಿಪುರವಾಸಿನಿ ಸಭಾಂಗಣದಲ್ಲಿ ಮೈದೆಳೆದು, ಮೈದುಂಬಿ, ಅಬ್ಬರಿಸಿ ಬೊಬ್ಬಿರಿದ ಈ ಕಾರ್ಯಕ್ರಮದ ಸೊಬಗನ್ನು ನೋಡಿ ಆಸ್ವಾದಿಸಿದ ಕಣ್ಣುಗಳು ಸಾವಿರಾರು. 12ನೇ ಪ್ರತಿಭೋತ್ಸವದ ಅಭೂತ ಪೂರ್ವ ಯಶಸ್ಸು ರಾಜ್ಯದ ಮನೆ ಮಾತಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

ಶಿಕ್ಷಣ ಎನ್ನುವುದೇ ಮಕ್ಕಳಿಗೆ ಶಿಕ್ಷೆಯಾಗಬಾರದು, ಅದು ವ್ಯಕ್ತಿಯನ್ನು ಶಕ್ತಿಯನ್ನಾಗಿಸುವ ಸಂಸ್ಕಾರವಾಗಬೇಕು, ಡಿಗ್ರಿಗಳನ್ನು ನೀಡುವ ವಿಶ್ವವಿದ್ಯಾನಿಲಯಗಳಿಂದ ಹೊರಬರುತ್ತಿರುವುದು ವಿದ್ಯಾವಂತರು ಮಾತ್ರ, ಆದರ ಜ್ಞಾನವಂತರು. . .?. ಸಂಸ್ಕಾರಯುತ ಶಿಕ್ಷಣದಿಂದ ಮಾತ್ರವೇ ಜ್ಞಾನವಂತರಾಗಲು ಸಾಧ್ಯ, ಅಂತಹ ಜ್ಞಾನದ ಹಸಿವು ತಲೆಯಲ್ಲಿ ನಿರಂತರವಾಗಿ ಜಾಗೃತವಾಗಬೇಕು, ಇನ್ನೂ ಬೇಕು ಎಂಬ ಜ್ಞಾನದ ತುಡಿತ ತೀವ್ರವಾಗುತ್ತಿರಬೇಕು. ಜ್ಞಾನದ ದಿವ್ಯ ಹಸಿವು ಶಮನಗೊಳ್ಳದಂತೆ ಸದಾ ಜಾಗೃತರಾಗಿ ಜ್ಞಾನ ದಾಹವನ್ನು ಹೆಚ್ಚಿಸಿಕೊಳ್ಳುವರೋ ಅವರೇ ಸಾಧಕರಾಗುತ್ತಾರೆ, ರಾಷ್ಟ್ರದ ಅಭಿವೃದ್ಧಿಯ ಶಕ್ತಿಯಾಗಿ ಬೆಳೆಯುತ್ತಾರೆ.

ಮಕ್ಕಳಿಗೆ ಮನೆಯಲ್ಲಿ ಹಿರಿಯರಿಂದ ದೊರೆಯುತ್ತಿದ್ದ ಸಂಸ್ಕಾರಗಳು, ಆದರ್ಶಗಳು ಬಹುತೇಕ ಕಣ್ಮರೆಯಾಗುತ್ತಿದೆ, ವಿದ್ಯಾ ಸಂಸ್ಥೆಗಳು – ವಿಶ್ವವಿದ್ಯಾಲಯಗಳು ರಾಜ–ಕೀಯ ನಾಯಕರ ಕಪಿ ಮುಷ್ಟಿಯಲ್ಲಿ ಸಿಲುಕಿ ಸಂಸ್ಕಾರಯುತವಾದ, ಆತ್ಮಸ್ಥೈರ್ಯ ಮೂಡಿಸುವ ಶಿಕ್ಷಣ ನೀಡುವಲ್ಲಿ ವಿಫಲವಾಗಿದೆ. ಇಂದಿನ ಬಹುತೇಕ ಶಿಕ್ಷಣ ಸಂಸ್ಥೆಗಳು ವ್ಯಾಪಾರಿ ಸಂಸ್ಥೆಗಳಂತೆ ಉದ್ಯಮಗಳಾಗಿ ಬೆಳೆಯುತ್ತಿವೆ. ಅದೇ ಕಾರಣವೋ ಏನೋ ನಮ್ಮ ಮಕ್ಕಳು ಸಾಲು ಸಾಲು ಡಿಗ್ರಿಗಳನ್ನು ಪಡೆದುಕೊಂಡರೂ ಧೈರ್ಯವಿಲ್ಲ, ಸ್ಥೈರ್ಯವಿಲ್ಲ, ಛಲವಿಲ್ಲ, ಸ್ವಾಭಿಮಾನದ ಬದಲು ದುರಾಭಿಮಾನಿಗಳಾಗಿದ್ದಾರೆ, ನಿಸ್ವಾರ್ಥಿಗಳಾಗುವ ಬದಲು ಸ್ವಾರ್ಥಿಗಳಾಗುತ್ತಿದ್ದಾರೆ. ಬಂಧ, ಸಂಭಂಧಗಳು, ಅನುಭಂದಗಳು ಎನ್ನುವ ಭಾವನೆಗಳು ಹೃದಯದ ಅಂತರಾಳದಿಂದ ಬರುವ ಬದಲಿಗೆ ಕೇವಲ ಮಾತಿಗೆ ಸೀಮಿತವಾಗಿದೆ. ಛಲ ಬಿಡದ ತ್ರಿವಿಕ್ರಮನಂತೆ ಕಾಯಾ–ವಾಚಾ–ಮನಸಾ ಕಾರ್ಯ ತತ್ಪರರಾಗಿ ಸಾಧಕರಾಬೇಕಾದ ನಮ್ಮ ಯುವಜನತೆ ಎತ್ತ ಸಾಗಿದೆ. . .? ದೇಶದ **950**ಕ್ಕೂ ಮೀರಿದ ವಿಶ್ವ ವಿದ್ಯಾಲಯಗಳಲ್ಲಿ **3** ಕೋಟಿ **20** ಲಕ್ಷಕ್ಕೂ ಮೀರಿದ ವಿಧ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದು, ಪ್ರತೀವರ್ಷ ಸರಿ ಸುಮಾರು **88** ಲಕ್ಷ ವಿದ್ಯಾರ್ಥಿಗಳು ತಮ್ಮ ಪದವಿಗಳನ್ನು ಮುಗಿಸಿ ಹೊರ ಬರುತ್ತಿದ್ದಾರೆ. ಆ ಪೈಕಿ ಕೇವಲ **8–9** ಲಕ್ಷ ಪಧವೀದರರು ಮಾತ್ರ ಸ್ವ ಉದ್ಯೋಗ – ಉದ್ಯೋಗ ಕ್ಷೇತ್ರದಲ್ಲಿ ಅವಕಾಶ ಪಡೆದು ಕೊಳ್ಳುತ್ತಿದ್ದಾರೆ. ಇನ್ನು ಉಳಿದ ಸುಮಾರು **80** ಲಕ್ಷ ಪಧವೀಧರರು, ಪದವಿಗಳನ್ನು ಪಡೆದರೂ ಸಹ ಅರ್ಹತೆಗೆ ತಕ್ಕ ಉದ್ಯೋಗಗಳಿಂದ ವಂಚಿತರಾಗುತ್ತಿದ್ದಾರೆ. ಇಂತಹ ಉದ್ಯೋಗ ವಂಚಿತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಕಾರಣ ಸಮಾಜದಲ್ಲಿ ಅಸ್ಥಿರತೆ ಎದ್ದು ಕಾಣುತ್ತಿದೆ. ನಿಜವಾದ ಶಿಕ್ಷಣ ಮಾನವನ ಘನತೆ ಗೌರವವನ್ನು ಹೆಚ್ಚಿಸಿ, ಅವರ ಆತ್ಮ ಗೌರವವನ್ನು ಬೆಳೆಸುತ್ತದೆ. **ಪ್ರತಿಯೊಬ್ಬ ವ್ಯಕ್ತಿಯೂ ಎರಡು ರೀತಿಯ ಶಿಕ್ಷಣವನ್ನು ಹೊಂದುತ್ತಾನೆ. ಒಂದು ಇತರರು ಅವನಿಗೆ ನೀಡುವುದು, ಇನ್ನೊಂದು ಅವನು ಸ್ವತ: ಕಲಿಯುವುದು. ಅಭಿರುಚಿಯನ್ನು ಹುಟ್ಟಿಸುವುದು ಶಿಕ್ಷಣದ ಉದ್ದೇಶ ಆಗಿರಬೇಕೇ ಹೊರತು ಒಬ್ಬರು ಕಲಿತಿದ್ದನ್ನು ಇನ್ನೊಬ್ಬರಿಗೆ ಹೇಳುವುದಲ್ಲ. ಮನುಷ್ಯನಿಗೆ ಮನಷ್ಯತ್ವವು ಪ್ರಾಪ್ತಿಯಾಗಬೇಕಾದರೆ ಶಿಕ್ಷಣವು ಅವಶ್ಯವಾಗಿ ಬೇಕು. ಬದುಕನ್ನು ಅರ್ಥಪೂರ್ಣವಾಗುವಂತೆ ಮಾಡುವುದೇ ಸಂಸ್ಕಾರಯುತ ಶಿಕ್ಷಣ.** ಅಂತಹ ಶಿಕ್ಷಣವನ್ನು ಪಡೆದು ಸಮಾಜದ ಕೀರ್ತಿ ಪ್ರತಿಷ್ಠೆಗಳಿಗೆ ಭಾಜನರಾದ 1509 ಶಿಕ್ಷಣ ಪ್ರತಿಭೆಗಳನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಪರವಾಗಿ ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಯುವ ಮಿತ್ರರೇ, **ಮನ ತಟ್ಟಿ ನಡೆವ ಛಲ ಬೇಕು, ಮನ ಮೆಟ್ಟಿ ನಡೆವ ಛಲವಲ್ಲ.,** ಛಲ ಎಂದರೇ ದೃಡ ನಿರ್ಧಾರ, ಹಠ ಅಚಲತೆ, ಬಲವಾದ ನಿಷ್ಠೆ, ಗಾಳಿ ಬಂದಂತೆ ತೂರಿಕೊಳ್ಳದಿರುವುದು, ಹಿಡಿದಿದ್ದನ್ನು ಬಿಡದಿರುವುದು.ಬಯಸಿದ್ದನ್ನು ಎಷ್ಟು ಎಡರು ತೊಡರುಗಳು ಬಂದರೂ ಸಾಧಿಸಿಯೇ ತೋರಿಸಿವುದು ಮೊಂಡುತನ, ಮೊರಡುತನ, ಬಗ್ಗೆ, ಕುಗ್ಗದೆ ನುಗ್ಗುವ ಎದಿಗಾರಿಕೆಯನ್ನು ಮೈಗೂಡಿಸಿಕೊಂಡಲ್ಲಿ ಮಾತ್ರವೇ ಜೀವನದಲ್ಲಿ ಸಾಧನೆಯ ಶಿಖರವನ್ನೇರಿಗುರಿ ಮುಟ್ಟುವುದು ಸಾಧ್ಯವಾಗುತ್ತದೆ. ಛಲವಿಲ್ಲದಿದ್ದರೆ **ಕಿವುಡನಿಗೆ ವೀಣೆಯಂತೆ, ಕುರುಡನಿಗೆ ಸುಂದರಿಯಂತೆ, ಸತ್ತವನಿಗೆ ಹೂ ಮಾಲಿಕೆಯಂತೆ ನಿಮ್ಮ ಪ್ರತಿಭೆಯು ವ್ಯರ್ಥವಾಗುತ್ತದೆ.** ಇತಿಹಾಸವನ್ನು ಸೃಷ್ಟಿಸಲು ಸಾದ್ಯವಿದೆ.



ವಿದ್ಯಾವಂತರಿಗೆ ಸಂಸ್ಕಾರ ನೀಡಿದಾಗ ಜ್ಞಾನವಂತರಾಗಿತ್ತಾರೆ. ಜ್ಞಾನವಂತರು ಹೆಚ್ಚಿದಾಗ ಸಮಾಜ ಸುಭೀಕ್ಷವಾಗುತ್ತದೆ. ಅಂತಹ ಸುಭಿಕ್ಷ ಸಮಾಜ ನಿರ್ಮಾಣದ ನೇತಾರರು ನೀವಾಗಬೇಕು. ವಿಶ್ವದಲ್ಲಿ ದೇಶದ ಘನತೆ ಗೌರವಗಳು ಮುಗಿಲೆತ್ತರಕ್ಕೆ ಯುವ ಶಕ್ತಿಗಳೇ ಸದಾ ನೆನಪಿನಲ್ಲಿರಲಿ ಗುರಿ ಮುಟ್ಟಲು ನಿರ್ಧರಿಸಿರುವ ಮನಸ್ಸನ್ನೂ, ಇಳಿಜಾರಿನಲ್ಲಿ **ಹರಿಯುವ ನೀರನ್ನೂ ಯಾರೂ ತಡೆಯಲು ಸಾದ್ಯವಿಲ್ಲ ಅಲಂಕೃತವಾಗದ ಸೌಂದರ್ಯವು ಹೇಗೆ ಮನಸೆಳೆಯುವುದಿಲ್ಲವೋ ಹಾಗೆಯೇ ಛಲವಿಲ್ಲದ ಸಂಸ್ಕಾರವಿಲ್ಲದ, ಮೌಲ್ಯವಿಲ್ಲದ ಶಿಕ್ಷಣ ಮೊತ್ತಬ್ಬರನ್ನು ಆಕರ್ಶಿಸುವುದಿಲ್ಲ.** ಜ್ಞಾನಾರ್ಜನೆಯೆಂದರೇ ಬೇರೆ ಏನೂ ಅಲ್ಲ, ಇರುವುದನ್ನು ಇರುವಂತೆ ಅರಿತುಕೊಳ್ಳುವುದು. ವಿಶ್ವದ ಏಕೈಕ ಚೈತನ್ಯ ಶಕ್ತಿ ಶಿಕ್ಷಣ. ಅಂತಹ ಶಿಕ್ಷಣವನ್ನು ಪರಿಪೂರ್ಣವಾಗಿ ತಮ್ಮದಾಗಿಸಿಕೊಂಡು ಬದುಕನ್ನು ಅರ್ಥ ಪೂರ್ಣ ವಾಗಿ ಕಳೆದಲ್ಲಿ ನೀವೂ ಒಂದು ಇತಿಹಾಸವನ್ನು ಸೃಷ್ಟಿಸಲು ಸಾದ್ಯವಿದೆ.

ವಿದ್ಯಾವಂತರಿಗೆ ಸಂಸ್ಕಾರ ನೀಡಿದಾಗ ಜ್ಞಾನವಂತರಾಗಿತ್ತಾರೆ. ಜ್ಞಾನವಂತರು ಹೆಚ್ಚಿದಾಗ ಸಮಾಜ ಸುಭೀಕ್ಷವಾಗುತ್ತದೆ. ಅಂತಹ ಸುಭಿಕ್ಷ ಸಮಾಜ ನಿರ್ಮಾಣದ ನೇತಾರರು ನೀವಾಗಬೇಕು. ವಿಶ್ವದಲ್ಲಿ ದೇಶದ ಘನತೆ ಗೌರವಗಳು ಮುಗಿಲೆತ್ತರಕ್ಕೆ ಹಾರಬೇಕು. ಅಂತಹ ದಿವ್ಯ ಭವ್ಯ ವ್ಯಕ್ತಿತ್ವ ತಮ್ಮದಾಗಬೇಕೆಂದು ಆಶಿಸುತ್ತಾ ತಾವು ಬೆಳೆದು ಮತ್ತೊಬ್ಬರನ್ನೂ ಬೆಳೆಸಿ ಜ್ಞಾನವಂತರ ಪರಂಪರೆಯನ್ನು ನಿರಂತರವಾಗಿ ಬೆಳಗುವ ಹೃದಯ ಶ್ರೀಮಂತಿಕೆ ಸದಾಕಾಲ ತಮ್ಮಲ್ಲಿ ಚಿಮ್ಮುತ್ತಿರಲೆಂದು ಆಶಿಸುತ್ತೇನೆ.

ಇತ್ತೀಚೆಗೆ ಬೆಂಗಳೂರು ಮಹಾನಗರದಲ್ಲಿ ನಮ್ಮ ಸಮಾಜದ ಶ್ರೀ ಹರಿವರದ, ಶ್ರೀ ಆರ್ ಎಸ್ ರಾಜೇಶ್‌ರವರುಗಳು **Connect Karnataka** ಎಂಬ ಅಭೂತ ಪೂರ್ವ ಕಾರ್ಯಕ್ರಮವನ್ನು ಬೆಂಗಳೂರು ಅರಮನೆ ಮೈದಾನದಲ್ಲಿ ನಡೆಸಿಕೊಟ್ಟರು. ಆರ್ಥಿಕ ದೃಷ್ಟಿಯಿಂದ ಕಾರ್ಯಕ್ರಮವೇನೂ ನಿರೀಕ್ಷಿಸಿದ ಮಟ್ಟದಲ್ಲಿ ಯಶಸ್ಸು ಕಾಣದಿದ್ದರೂ, ಲಕ್ಷಾಂತರ ಜನಗಳನ್ನು ತಲುಪುವಲ್ಲಿ ಯಶಸ್ವಿಯಾಯಿತು. ಈ ಕಾರ್ಯಕ್ರಮದ ಮೂಲ ಉದ್ದೇಶವೇ ಸ್ವ – ಉದ್ಯೋಗವನ್ನು ಸೃಷ್ಟಿಸಿ ಸ್ವಾವಲಂಬಿಗಳಾಗಿಸುವುದು. ಇಂತಹ ಕಾರ್ಯಕ್ರಮಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹೆಚ್ಚು ಹೆಚ್ಚು ಮೂಡಿ ಬರಬೇಕು. ತನ್ಮೂಲಕ ವ್ಯಾಪಾರ ವ್ಯವಹಾರಗಳಿಂದ ದೂರ ಸರಿಯುತ್ತಿರುವ ಯುವ ಜನತೆ ಮತ್ತೊಮ್ಮೆ ಸ್ವಂತ ಉದ್ಯೋಗವನ್ನು ಪ್ರಾರಂಬಿಸಿ ಉದ್ಯೋಗದಾತ ರಾಗಬೇಕೆಂದು ಮಹಾಸಭೆ ಆಶಯ.

ಕಾರ್ಯಕ್ರಮದ ಆಯೋಜಕರಾದ ಯುವ ಮಿತ್ರರನ್ನು ಮಹಾಸಭೆ ಅಭಿನಂದಿಸುತ್ತದೆ.

**ಆರ್ ಪಿ ರವಿಶಂಕರ್**
**ಅಧ್ಯಕ್ಷರು**

## ಅಭಿನಂದನೆಗಳು



ಕೆ. ಜಿ. ಸುಬ್ಬರಾಮ ಶೆಟ್ಟಿ

ನಾಡಿನ ಹಿರಿಯ ವಾಣಿಜ್ಯೋದ್ಯಮಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ, ವ್ಯವಹಾರವನ್ನು ವಿಸ್ತರಿಸಿ ಸಾವಿರಾರು ಜನಕ್ಕೆ ಉದ್ಯೂಗವನ್ನು ನೀಡಿರುವ **ಶ್ರೀ ಕೆ ಜಿ ಸುಬ್ಬರಾಮ ಶೆಟ್ಟಿರವರು** ಸಾಮಾಜಿಕವಾಗಿಯೂ ಚಿರಪರಿಚಿತರು. **ರಾಷ್ಟ್ರೀಯ ಸ್ವಯಂಸೇವಾ ಸಂಘದ** ಮೂಲಕ ಬೃಹತ್ ಯೋಜನೆಗಳನ್ನು ಸಮಾಜಕ್ಕೆ ಅರ್ಪಿಸಿರುವ ಶ್ರೀಯುತರು ಜನಸೇವಾ ವಿದ್ಯಾ ಕೇಂದ್ರದ ಮಾಜಿ ಅಧ್ಯಕ್ಷರು. ವಾಸವೀ ಸಮುದಾಯ ಭವನ **ವಾಸವಿ ವಿದ್ಯಾನಿಕೇತನ, ಆರ್.ವಿ ಶಿಕ್ಷಣ ಸಮೂಹ ಸಂಸ್ಥೆಗಳಲ್ಲಿ** ಮೂರು ದಶಕಗಳ ಕಾಲ ನಿರಂತರ ಸೇವೆಗಳನ್ನು ಸಲ್ಲಿಸಿ ಸಹಸ್ರಾರು ವಿದ್ಯಾರ್ಥಿಗಳಿಗೆ ಭವಿಷ್ಯದ ಬೆಳಕಾಗಿರುವ **ಶ್ರೀ ಕೆ ಜಿ ಸುಬ್ಬರಾಮ ಶೆಟ್ಟಿ** ಅವರ ಸೇವೆಯನ್ನು ಕರ್ನಾಟಕ **ಘನ ಸರ್ಕಾರವು** ಗುರುತಿಸಿ 2022ರ **ರಾಜ್ಯೋತ್ಸವ ಪ್ರಶಸ್ತಿಯನ್ನು** ನೀಡಿ ಗೌರವಿಸಿದೆ. ಈ ಶುಭ ಸಂದರ್ಭದಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಸಮಾಜದ ಪರವಾಗಿ ಹಾರ್ದಿಕವಾಗಿ ಅಭಿನಂದಿಸುತ್ತದೆ.

# ಅಭಿನಂದನೆಗಳು




ಕುಮಾರಿ ಸಿರಿ ಕೊಂಡ

ಹೊಸ ದಿಲ್ಲಿಯ ಸಿ ಬಿ ಎಸ್ ಇ ವತಿಯಿಂದ **ಅಭಿವೃದ್ಧಿ ಹೊಂದಿದ ದೇಶವಾಗಿ ಭ್ರಷ್ಟಾಚಾರ ಮುಕ್ತ ಭಾರತ** ಕುರಿತು ಏರ್ಪಡಿಸಿದ್ದ ರಾಷ್ಟ್ರಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ತುಮಕೂರು ನಗರದ **ಕುಮಾರಿ ಸಿರಿ ಕೊಂಡ**ರವರು ಮೊದಲ ಐವರಲ್ಲಿ ಒಬ್ಬರಾಗಿ ಹಾಗೂ ದಕ್ಷಿಣ ಭಾರತಕ್ಕೆ ಏಕೈಕರಾಗಿ ಬಹುಮಾನ ಗಳಿಸಿದ್ದಾರೆ. ಇವರು ತುಮಕೂರಿನ ಹೆಸರಾಂತ ನರಸಿಂಹ ಸ್ಟೋರ್ಸ್ ಕುಟುಂಬಕ್ಕೆ ಸೇರಿದ, ಚಾರ್ಟರ್ಡ್ ಅಕೌಂಟೆಂಟ್ ಹಾಗೂ ವೈಶ್ಯ ಸಹಕಾರ ಬ್ಯಾಂಕ್‌ನ ಉಪಾಧ್ಯಕ್ಷರೂ ಆಗಿರುವ ಶ್ರೀ ಕೆ.ಎಸ್ ರಾಮಮೂರ್ತಿ ಮತ್ತು ಶ್ರೀಮತಿ ಕವಿತಾ ರಾಮಮೂರ್ತಿರವರ ಮಗಳು. ಈಕೆ ನಗರದ ಟಿ ವಿ ಎಸ್ ಶಾಲೆಯ ಹತ್ತನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಇವರನ್ನು ರಾಜಧಾನಿ ದಿಲ್ಲಿಯಲ್ಲಿ **ಪ್ರಧಾನ ಮಂತ್ರಿಯವರಾದ ಶ್ರೀ ನರೇಂದ್ರ ಮೋದಿಯವರು** ನವೆಂಬರ್ 3 2022ರಂದು ಹೊಸ ದಿಲ್ಲಿಯ ವಿಜ್ಞಾನ ಭವನದಲ್ಲಿ ನಡೆದಿರುವ ಸಮಾರಂಭದಲ್ಲಿ ಬಹುಮಾನ ನೀಡಿ ಗೌರವಿಸಿದ್ದಾರೆ. ಇಂತಹ ಅಪರೂಪದ ಸಾಧನೆಯನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಹಾರ್ದಿಕವಾಗಿ ಅಭಿನಂದಿಸುತ್ತದೆ.

# ಲ್ಯಾಪ್‌ಟಾಪ್ ಯೋಜನೆ

LAST DATE FOR APPLICATION 31.12.2022

## ಉನ್ನತ ಶಿಕ್ಷಣದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ

ವೃತ್ತಿಪರ ಕೋರ್ಸ್‌ಗಳಲ್ಲಿ (PROFESSIONAL COURSE) ಅಂದರೇ ಎಂ.ಬಿ.ಎ (M B A), ಎಂ.ಸಿ.ಎ (M C A), ಬಿ.ಸಿ.ಎ (B C A) ಎಂ.ಎಸ್ಸಿ ಕಂಪ್ಯೂಟರ್ ( M Sc COMPUTER SCINCE), ಬಿ.ಎಸ್ಸಿ ಕಂಪ್ಯೂಟರ್ (B Sc COMPUTER SCIENCE), ಡಿಪ್ಲೋಮಾ ಇನ್ ಕಂಪ್ಯೂಟರ್ ( DIPLOMA IN COMPUTERS), ಬಿ.ಇ (BE), ಎಂ.ಟೆಕ್ (M TECH), ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತರು ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಕಾಲೇಜು ವಿದ್ಯಾರ್ಥಿಗಳ ಶಿಕ್ಷಣದ ಅನುಕೂಲಕ್ಕಾಗಿ ಮಹಾಸಭೆಯ ನಿಬಂಧನೆಗಳನ್ವಯ ಶೇ 25ರ ಬೆಲೆಗೆ ಲ್ಯಾಪ್‌ಟಾಪ್‌ಗಳನ್ನು ನೀಡುವ ವಿನೂತನ ಯೋಜನೆಯನ್ನು ಪರಿಚಯಿಸುತ್ತಿದೆ.

### ಈ ಯೋಜನೆಯ ಪ್ರಯೋಜನ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು



- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದವರಾಗಿರಬೇಕು.
- ಕರ್ನಾಟಕದ ಯಾವುದೇ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾಗಿರಬೇಕು.
- ಹಿಂದಿನ ಪರೀಕ್ಷೆಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳಿಸಿರಬೇಕು.
- ಸ್ಥಳೀಯ ಆರ್ಯವೈಶ್ಯ ಸಂಘ/ಸದರಿ ಜಿಲ್ಲೆಯ ಮಹಾಸಭೆ ಕಾರ್ಯಕಾರಿ ಸಮಿತಿ ಸದಸ್ಯರು/ಜಿಲ್ಲಾ ಸಮಿತಿ ಅಧ್ಯಕ್ಷ/ಕಾರ್ಯದರ್ಶಿಗಳ ಧೃಡೀಕರಣವನ್ನು ನೀಡಬೇಕಿರುವುದು ಕಡ್ಡಾಯವಾಗಿರುತ್ತದೆ.
- ವಿದ್ಯಾರ್ಥಿಗಳು ಲ್ಯಾಪ್‌ಟಾಪ್ ಬೆಲೆಯ ಶೇ.25ರಷ್ಟು ಮೊತ್ತವನ್ನು ಭರಿಸಲು ಸಿದ್ದರಿರಬೇಕು.
- ಯಾವುದೇ ಕಾರಣ ನೀಡದೆ ಅರ್ಜಿಗಳನ್ನು ಪುರಸ್ಕರಿಸುವ–ತಿರಸ್ಕರಿಸುವ ಅಧಿಕಾರ ಕರ್ನಾಟಕ ಆರ್ಯವೈಶ್ಯ ಮಹಾಸಭೆಯದ್ದಾಗಿರುತ್ತದೆ.
- ಲ್ಯಾಪ್‌ಟಾಪ್ ಪಡೆಯಲು ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಕೊಡಮಾಡಲಿರುವ ಲ್ಯಾಪ್‌ಟಾಪ್ ಮಾಡೆಲ್ ಬಗ್ಗೆ ತಿಳಿಸಲಾಗುತ್ತದೆ.

ಅರ್ಜಿಗಳನ್ನು **online** ನಲ್ಲಿ ಭರ್ತಿ ಮಾಡಲು ಮಾತ್ರ ಅವಕಾಶವಿರುತ್ತದೆ **online** ಅರ್ಜಿಗಳಿಗಾಗಿ **www.kavms.com** ಸಂಪರ್ಕಿಸಿ

**ವಿಶೇಷ ಸೂಚನೆ : ನೇರವಾಗಿ ಬಂದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ**

**ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 31–12–2022**


ADTV

www.vysyalagnam.in
Vysya Lagnam
|| SUBHAMASTHU || || KALYANAMASTHU ||
A.O.: C/o. Sri Vasavi Temple, Sampangirama Nagar,
(Near Corporation Circle), Bengaluru-560 027
Helpline & : 99452 97888 email : info@vysyalagnam.in

ವೈಶ್ಯಲಗ್ನಂ ಅಂತರ್ಜಾಲ
ವಿವಾಹ ಪರಿಚಯ ಮೇಳ VOM-12 (2023)
ಶನಿವಾರ 07-01-2023

01-01-1991 ರಂದು ಅಥವಾ ನಂತರ ಹುಟ್ಟಿದವರಿಗೆ ಮಾತ್ರ
ಪುನರ್ ವಿವಾಹ ಮಾಡಿಕೊಳ್ಳುವವರು ಇದರಲ್ಲಿ ಭಾಗವಹಿಸುವಂತಿಲ್ಲ.

ಪಾವತಿಯ ವಿವರಗಳು
ಪಾವತಿಯ ಕಡೆಯ ದಿನಾಂಕ 25-12-2022
ಮೊದಲು ಬಂದವರಿಗೆ 250/– ರಿಯಾಯಿತಿ ಈ ದಿನಾಂಕದವರೆಗೆ 11-12-2022

ಆಯ್ಕೆ – ಎ
ನಮ್ಮ ವೆಬ್‌ಸೈಟ್‌ನಲ್ಲಿ
1 (ಒಂದು) ವರ್ಷದ
ಸದಸ್ಯತ್ವದ ಸಹಿತ
₹ 1,750 (1500)

ಆಯ್ಕೆ – ಬಿ
ನಮ್ಮ ವೆಬ್‌ಸೈಟ್‌ನಲ್ಲಿ
ಸದ ಸ್ಯತ್ವ ರಹಿತ
(ಮೇಳದಲ್ಲಿ ಭಾಗವಹಿಸುವುದು ಮಾತ್ರ)
₹ 850 (600)

ಕಮಿಷನ್ ಇಲ್ಲ | ಬ್ರೋಕರೇಜ್ ಇಲ್ಲ | ಇದು ಸಮುದಾಯ ಸೇವೆ
ಈ ಪರಿಚಯ ಮೇಳಕ್ಕೆ ನೋಂದಾಯಿಸಿಕೊಂಡವರಲ್ಲಿ ಪರಸ್ಪರ ಮದುವೆ ನಡೆದರೆ ಅವರಿಗೆ ನಮ್ಮ ಕಡೆಯಿಂದ ಉಡುಗೊರೆ ಕೊಡಲಾಗುವುದು.
ಶೀಘ್ರಮೇವ ಕಲ್ಯಾಣ ಪ್ರಾಪ್ತಿರಸ್ತು
ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ - www.vysyalagnam.in
ಕಾರ್ಯಕ್ರಮದ ಸಂಚಾಲಕರು : ಬಿ.ಕೆ. ನರೇಂದ್ರ ಬಾಬು – 93412 15942


## ಮಹಾಸಭಾವತಿಯಿಂದ 4 ದಿನಗಳ

# ಸಾಗರ ಪ್ರವಾಸ



ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಸಮುದಾಯದ ಬಂಧುಗಳಿಗಾಗಿ ಕ್ರೂಸ್‌ನಲ್ಲಿ 4 ದಿನಗಳ ಪ್ರವಾಸವನ್ನು ಏರ್ಪಡಿಸಿದೆ.

2023 ಫೆಬ್ರವರಿ 8 ರಿಂದ ಫೆಬ್ರವರಿ 11ನೇ ತಾರೀಖಿನವರೆಗೆ ನಡೆಯುವ ಈ ಪ್ರವಾಸ ಬೆಂಗಳೂರಿನಿಂದ ಪ್ರಾರಂಭವಾಗಿ ಕೊಚ್ಚಿ > ಲಕ್ಷದ್ವೀಪ > ಮುಂಬೈ ಮೂಲಕ ಬೆಂಗಳೂರಿನಲ್ಲಿ ಅಂತ್ಯವಾಗುತ್ತದೆ.

ಐಶಾರಾಮಿ ಹಡಗಿನಲ್ಲಿ ಪ್ರಯಾಣಿಸುವ ಈ ಒಂದು ಪ್ರವಾಸಕ್ಕೆ

**ಒಬ್ಬರಿಗೆ ರೂ. 53,000**

ಬ ರೂಪಾಯಿಗಳಾಗುತ್ತದೆ.

ಆಸಕ್ತರು ಸಂಪರ್ಕಿಸಬೇಕಾದ ವಿಳಾಸ

ಸಾಯಿರಾಜ್.ಟಿ, ಇನ್ಫಿಟಿ ಟೂರ್ಸ್ ಮೊ॥ 8880333337

ಹೆಚ್ಚಿನ ಮಾಹಿತಿಗಾಗಿ ಮಹಾಸಭ ಅಧಿಕೃತ ವೆಬ್‌ಸೈಟ್

**www.kavms.com** ಗೆ ಭೇಟಿ ನೀಡಿ

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152